ದಿ: 07-05-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ ಕೆ.)**:

8. ವಿಸಿ ಮೂಲಕ ಆರೋಪಿತರನ್ನು ನೋಡಿ ಗುರುತಿಸುತ್ತೇನೆ ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. (ಮೂಲ ಪ್ರತಿಗಳನ್ನು Spl.C.NDPS.9/2020 ರಲ್ಲಿ ಇರುವುದನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ. ಈ ರೀತಿ ಗುರುತಿಸಿರುವ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.)

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.), ವಕೀಲರಿಂದ 3 ನೇ ಆರೋಪಿತರ ಪರವಾಗಿ**:

9. ನಮ್ಮ ಮನೆಯಿಂದ ಗ್ರಾಮಾಂತರ ಪೊಲೀಸ್ ಠಾಣೆಯು 06 ಕಿ.ಮೀ. ಅಂತರ ಇದೆ ಅಂದರೆ ಸರಿಯಲ್ಲ 02-03 ಕಿ.ಮೀ ಅಂತರ ಇರುತ್ತದೆ. ನಮ್ಮ ಮನೆಯಿಂದ ನಮ್ಮ ಕಛೇರಿ 03 ಕಿ.ಮೀ. ಅಂತರ ಇರುತ್ತದೆ. ಗ್ರಾಮಾಂತರ ಪೊಲೀಸ್ ಠಾಣೆಯು ನಮ್ಮ ಕಛೇರಿಯಿಂದ ಗುತ್ತೂರು ಹತ್ತಿರ ಬರುತ್ತದೆ ಅಂದರೆ ನಿಜ. ನಮ್ಮ ಕಛೇರಿಯಿಂದ ಗ್ರಾಮಾಂತರ ಪೊಲೀಸ್ ಠಾಣೆಯು 03 ಕಿ.ಮೀ. ಅಂತರ ಇರುತ್ತದೆ. ಸದರಿ ರಸ್ತೆಯಲ್ಲಿ ಸಾಕಷ್ಟು ಸರ್ಕಾರಿ ಕಛೇರಿಗಳು ಇರುತ್ತವೆ ಅಂದರೆ ನಿಜ. ನಾನು ಎಲ್ಲಾ ಪ್ರಕರಣದಲ್ಲಿ ಪಂಚರಾಗಿದ್ದೇನೆ ಅಂದರೆ ನಿಜ. ಹರಿಹರದ ಬೈ ಪಾಸ್ ರಸ್ತೆಯಲ್ಲಿ ವೈನ್ ಶಾಪ್, ಅಂಗಡಿಗಳು ಮತ್ತು ಪೆಟ್ರೋಲ್ ಬಂಕ್ ಇವೆ ಅಂದರೆ ಪೆಟ್ರೋಲ್ ಬಂಕ್ ಇಲ್ಲ, ಡಾಬಾ ಇವೆ. ಅಲ್ಲಿ ಪೆಟ್ರೋಲ್ ಬಂಕ್ ಇಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೈ ಪಾಸ್ ರಸ್ತೆಯ ಎಡಗಡೆಯಲ್ಲಿ ಪೆಟ್ರೋಲ್ ಬಂಕ್ ಇದೆ. ಅನಗವಾಡಿ ಕ್ರಾಸ್ ನಲ್ಲಿ ಮತ್ತೊಂದು ಪೆಟ್ರೋಲ್ ಬಂಕ್ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ಅಂಗಡಿಗಳಲ್ಲಿ ಸಿಸಿಟಿವಿ ಇದೆ ಅಂದರೆ ನಿಜ. ಆ ಬೈ ಪಾಸ್ ರಸ್ತೆಯಲ್ಲಿ ವಿಳದ್ಯೆಲೆ ಮಾರ್ಕೆಟ್ ಇದೆ ಅಂದರೆ ನಿಜ. ಅದು ಜನನಿಬೀಡ ಪ್ರದೇಶ ಅಂದರೆ ನಿಜ.

10. ನಿಪಿ-1 ನ್ನು ನನಗೆ ಪ್ರತ್ಯೇಕವಾಗಿ ನೀಡಿರುವುದಿಲ್ಲ. ನನಗೆ ನಿಪಿ-1 ನ್ನು ಎಷ್ಟು ಗಂಟೆಗೆ ಜಾರಿ ಮಾಡಿದರು ಅಂದರೆ ಮಧ್ಯಾಹ್ನ 12.30 ಗಂಟೆಗೆ ಮಾಡಿದರು. ಆ ಸಮಯದಲ್ಲಿ ನಿಪಿ-1 ರಲ್ಲಿ ಬರೆದಿಲ್ಲ ಅಂದರೆ ನಿಜ. ಆ ಬೈ ಪಾಸ್ ನಲ್ಲಿ ಗಸ್ತು ವಾಹನ ಯಾವಾಗಲೂ ಓಡಾಡುತ್ತಿರುತ್ತದೆ ಅಂದರೆ ನಿಜ. ನಿಪಿ-3 ರಲ್ಲಿ ಯಾರೂ ID Card ಧರಿಸಿಲ್ಲ ಅಂದರೆ ನಿಜ. ನನ್ನ ಸಮಕ್ಷಮ Search list ಮಾಡಿಲ್ಲ ಸಹಿ ಪಡೆದುಕೊಂಡಿಲ್ಲ. Memo of Arrest ಗೆ ನನ್ನ ಸಹಿ ಪಡೆದುಕೊಂಡಿಲ್ಲ. Chain of custody ಮಾಡಿಲ್ಲ. ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿಲ್ಲ. ಸ್ಥಳದಲ್ಲಿ ವಿಡಿಯೋಗ್ರಾಫಿ ಮಾಡಿಲ್ಲ. ಆರೋಪಿತರಿಂದ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿಲ್ಲ, ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ-8 ರಲ್ಲಿ Face mask ಹಾಕಿರುವುದರಿಂದ ಅವರು ಯಾರು ಅಂತ ಗೊತ್ತಾಗುವುದಿಲ್ಲ ಅಂದರೆ ನನಗೆ ಗೊತ್ತಾಗುತ್ತದೆ. ನಿಪಿ-9 ರಲ್ಲಿ Face mask ಹಾಕಿರುವುದರಿಂದ ಅವರು ಯಾರು ಅಂತ ಗೊತ್ತಾಗುವುದಿಲ್ಲ ಮತ್ತು ಆರೋಪಿತರು ಕಾಣುವುದಿಲ್ಲ ಅಂದರೆ ಒಬ್ಬ ಆರೋಪಿ ಕಾಣುತ್ತಾರೆ. ಆರೋಪಿತರು ಕಾಣುವುದಿಲ್ಲ ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-10 ರಲ್ಲಿ ಆರೋಪಿತರು ಕಾಣುವುದಿಲ್ಲ ಮತ್ತು ಯಾರೂ ಕಾಣುವುದಿಲ್ಲ ಮತ್ತು ವಸ್ತುಗಳ ಸಹ ಕಾಣುವುದಿಲ್ಲ ಅಂದರೆ ಅವುಗಳನ್ನು ಬಟ್ಟೆಯಲ್ಲಿ ಕಟ್ಟಿದ್ದಾರೆ.

11. ಹರಿಹರದಲ್ಲಿ ಆರೋಗ್ಯ ಮಾತೆ ಚರ್ಚ್ ಇದೆ ಅಂದರೆ ನಿಜ. ಅಲ್ಲಿ ವರ್ಷದಲ್ಲಿ ವಾರಗಂಟಲೆ ಜಾತ್ರೆ ಆಗುತ್ತದೆ ಅಂದರೆ ನಿಜ. 3 ನೇ ಆರೋಪಿಯು ಆ ದಿನ ಚರ್ಚೆಗೆ ಬಂದವರನ್ನು ಪೊಲೀಸರು ಅವರನ್ನು ಕರೆದುಕೊಂಡು ಹೋಗಿ ಸುಳ್ಳು ಕೇಸ್ ದಾಖಲಿಸಿ, ಪೊಲೀಸರು ಹೇಳಿದ ಹಾಗೆ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಡಾಬಾದ ಕಾನೆಶುಮಾರಿ ನಂಬರ ನನಗೆ ಗೊತ್ತಿಲ್ಲ ಹಾಗೂ ಅದು ಯಾವ ಸರ್ವೆ ನಂಬರನಲ್ಲಿದೆ ಅಂತ ನನಗೆ ಗೊತ್ತಿಲ್ಲ. ನಿಪಿ-3 ರ ಪೋಟೋದಲ್ಲಿ ಅದೇ ಭರಣಿ ಹೋಟೆಲ್ ಅಂತ ತೋರಿಸಲು ಯಾವುದೇ ಗುರುತು ಇಲ್ಲ ಅಂದರೆ ನಿಜ. ನಾನು ಹೇಳಿದ

ರೀತಿಯಲ್ಲಿ ಯಾವುದೇ ಭರಣಿ ಹೋಟೆಲ್ ಇಲ್ಲ ಅಂದರೆ ಸುಳ್ಳು. ಆ ಪೋಟೋದಲ್ಲಿ ಇಂಡಿಯನ್ ಡಾಬಾ ಕಾಣುತ್ತಿಲ್ಲ ಅಂದರೆ ಉತ್ತರ ದಿಕ್ಕಿನಲ್ಲಿದೆ. ನಿಪಿ-3 ರಲ್ಲಿ ಪಪ್ಪಾಯ ತೋಟ ಕಾಣುತ್ತಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಭರಣಿ ಹೋಟೆಲ್ ನ ಹಿಂಬದಿಯಲ್ಲಿದೆ. ನಾನು ಹೇಳಿದ ರೀತಿಯಲ್ಲಿ ಯಾವುದೇ ಪಪ್ಪಾಯ ತೋಟ ಇಲ್ಲ ಅಂದರೆ ಸುಳ್ಳು. ಮುದ್ದೆ ಮಾಲುಗಳನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದು ಸುಳ್ಳು ಅಂದರೆ ಸರಿಯಲ್ಲ. ಮು.ಮಾ.1 ರಿಂದ 7 ಯಾವುದು ಗಾಂಜಾ ಅಲ್ಲ ಅಂದರೆ ಸುಳ್ಳು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರವಾಗಿ**:

3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.